ಎಂದು ಹೇಳಿದ್ದಾರೆ. ನಮ್ಮ ಜನರು ತುಳು ಭಾಷೆಯನ್ನು ಆಡತಕ್ಕವರು, ಆದರೆ ಪ್ರಾಥಮಿಕ ಶಾಲಾ ಹಂತದಲ್ಲಿ ಕನ್ನಡವನ್ನು ಕಲಿಯುತ್ತಾರೆ. ಹೈಸ್ಕೂಲ್ ಮಟ್ಟದಲ್ಲಿ ಕನ್ನಡವನ್ನು ಕಲಿಯುತ್ತಾರೆ. ಇದಲ್ಲದೇ ಅನೇಕ ರೀತಿಯಲ್ಲಿ ನಮಗೆ ಮಲತಾಯಿ ಧೋರಣೆ ಸರಕಾರದ ವತಿಯಿಂದ ಕಂಡು ಬಂತ್ತದೆ. ಅನೇಕ ಅಭಿವೃದ್ಧಿ ಕೆಲಸಕಾರ್ಯಗಳು ಇದು ಎದ್ದು ಕಂಡುಬರುತ್ತದೆ. ನೂರಾರು ವರ್ಷಗಳ ಸಂತರ ಒಂದು ಫರ್ಸ್ಟ್‌ಗ್ರೇಡ್ ಕಾಲೇಜು ಇದ್ದುದು ಎರಡನೇ ಫರ್ಸ್ಟ್‌ಗ್ರೇಡ್ ಕಾಲೇಜು ಬಂದಿದೆ. ಇವೊತ್ತು ವಿದ್ಯಾಕ್ಷೇತ್ರದಲ್ಲಿ ಸರಕಾರದವರು ಸೂಕ್ತವಾಗಿ ಕಾರ್ಯಕ್ರಮಗಳನ್ನು ಜಿಲ್ಲೆಗೆ ಹಾಕಿಕೊಂಡಿದ್ದಲ್ಲಿ ಬಹಳಷ್ಟು ಮುಂದುವರಿಯಬಹುದಾದಂಥ ಜಿಲ್ಲೆಯಾಗಿತ್ತು. ಇದರ ಬಗ್ಗೆ ಇನ್ನಾದರೂ ವಿಚಾರ ಮಾಡಬೇಕಾಗಿದೆ. ಮಾಂಗಳೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜಿನಲ್ಲಿ ಕೊರತೆ ಇದೆ. ಅದಕ್ಕೆ ಶಾಶ್ವತವಾದ ಒಂದು ವ್ಯವಸ್ಥೆಯು ಇನ್ನೂ ಆಗಿಲ್ಲ. ನೈಸರ್ಗಿಕ ವ್ಯವಸ್ಥೆಯನ್ನು. ಅಂದರೆ ನೇತ್ರಾವತಿ ನದಿನೀರನ್ನು ಬಳಸಿಕೊಳ್ಳುವಬಗ್ಗೆ, ಅದನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಒಂದು ಯೋಜನೆಯನ್ನು ಇನ್ನೂ ಮಾಡುವುದಕ್ಕೆ ಆಗಿಲ್ಲ. ಹರಿಯುವ ನದಿ ನೀರು ಎಲ್ಲಾದರೂ ಬತ್ತಿ ಹೋದರೆ ನಗರದ ಜನರಿಗೆ ಬಹಳ ಕಷ್ಟ ಪರಿಸ್ಥಿತಿಯು ಬರುತ್ತದೆ. ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ನಗರಕ್ಕೆ ನೀರು ಸರಬರಾಜು ಮಾಡುವ ಶರಪಾಡಿ ಯೋಜನೆಯನ್ನು ಸರಕಾರದವರು ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ಶೀಘ್ರದಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನದಿಯು ಸಮುದ್ರಕ್ಕೆ ಸೇರುವ ಭಾಗ, ಅದನ್ನು ಅಳಿವೆ ಬಾಗಿಲು ಎಂದು ಕರೆಯುತ್ತಾರೆ ಇಂಥ ಕಡೆಗಳಲ್ಲಿ ಡ್ರೆಜ್ಜಿಂಗ್ ಮಾಡದಿದ್ದ ಕಾರಣ ಮಿನುಗಾರಿಕೆ ನಡಾಯುವಾಗ ಅನೇಕ ಜನ ಮಿನುಗಾರರು ದುರಂತಕ್ಕೆ ಈಡಾಗಿರುವುದು ತಮಗೆ ತಿಳಿದಿರುವ ವಿಚಾರವಾಗಿದೆ. ಇದರ ಬಗ್ಗೆ ಡ್ರೆಜ್ಜಿಂಗ್ ಮಾಡಬೇಕೆಂದು ಸರಕಾರದವರಲ್ಲಿ ಕೇಳಿಕೊಂಡಿದ್ದರೂ ಕೂಡ ಅದರ ಬಗ್ಗೆ ಸರಕಾರದವರು ಮೌನವರ್ತನೆಯನ್ನು ಅನುಸರಿಸಿದ್ದಾರೆ. ಇಂಥ ಸಂದರ್ಭದಲ್ಲಿ ನಮ್ಮ ಸಮಸ್ಯೆಯ ಪರಿಹಾರಕ್ಕಾಗಿ ನಾವು ಮೌನವಾಗಿರುವುದರಿಂದಾಗಿ ಪರಿಹಾರ ಕಾಣದೇ ಉಳಿದಿವೆ. ಹಿಂದೆ ವರುಣ ನಾಲೆಯ ಬಗ್ಗೆ ತಾವುಗಳು ಕೂಡಮಾಡಿದ ಯತ್ನಗಳನ್ನು ನಾವು ಕಂಡಿದ್ದೇವೆ. ಇವೊತ್ತು ರಾಷ್ಟ್ರದ ಅನೇಕ ಸಮಸ್ಯೆಗಳ ಬಗ್ಗೆ ಚಿಕಂವಳಿಯೊಗುತ್ತಾ ಇದೆ. ಅದು ಅಸ್ಸಾಂ ಮುಂತಾದ ಕಡೆ ಚಳುವಳಿಗಳು ನಡೆಯುತ್ತಿದ್ದುದನ್ನು ನಾವು ನೋಡುತ್ತಾ ಇದ್ದೇವೆ. ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರವನ್ನು ಸರಕಾರದವರು ಸಕಾಲದಲ್ಲಿ ಮಾಡಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ ಜನರು ತಮ್ಮದೇ ಆದ ಪ್ರಯತ್ನಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ಇಂಥ ನೂರಾರು ಸಮಸ್ಯೆಗಳು ನಮ್ಮ ಜಿಲ್ಲೆಯ ಮಟ್ಟಿಗೆ ಜೀವಂತವಾಗಿ ಉಳಿದಿವೆ. ಅವುಗಳಿಗೆ ಪರಿಹಾರವನ್ನು ಕೊಡಲು ಸರಕಾರದವರು ನಿಜವಾದ ಮನಸ್ಸಿನಿಂದ ಪ್ರಾಮಾಣಿಕವಾಗಿ ಯತ್ನಿಸಬೇಕು. ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಮಾಡಿಕೊಡಲು ಸರಕಾರವು ಪೂರ್ಣ ಪ್ರಮಾಣದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತದೆ ಎಂಬ ಭರವಸೆಯನ್ನು ವ್ಯಕ್ತಪಡಿಸಿ, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ಈ ದಿನ ಬೆಳಿಗ್ಗೆ ೧೧-೩೫ಕ್ಕೆ ಪ್ರೇಕ್ಷಕರ ವೇದಿಕೆಯಿಂದ ಈ ಕೆಳಗೆ ಕಂಡ ವ್ಯಕ್ತಿಗಳು ಘೋಷಣೆಗಳನ್ನು ಕೂಗಿ ಕರಪತ್ರಗಳನ್ನು ಸದನದಲ್ಲಿ ಎಸೆದಿದ್ದಾರೆ.

ಶ್ರೀಯುತರುಗಳಾದ.—

ಜಿ. ಗುರುಪ್ರಸಾದ್ ಬಿನ್ ಚೆನ್ನಬಸಪ್ಪ,
ವಯಸ್ಸು—೩೩, ನಂ. ೨೬, ಬಿ. ಎಸ್. ಲೇನ್, ಚಿಕ್ಕಪೇಟೆ ಕ್ರಾಸ್, ಬೆಂಗಳೂರು.

ಸಿ. ಕೆ. ರಾಮೇಗೌಡ ಬಿನ್ ಲೇಟ್ ಕಳಸೇಗೌಡ,
ನಂ. ೯೭೫, ೨೫ನೇ ಮುಖ್ಯರಸ್ತೆ, ಶ್ರೀನಗರ ಬೆಂಗಳೂರು.

ಎಂ. ಎಸ್. ನಾಗರಾಜ ಬಿನ್ ಎಂ. ಎಸ್. ಸೋಮಶೇಖರ,

೨೮ ವರ್ಷ, ನಂ. ೮೬, ೬ನೇ ಮುಖ್ಯ ರಸ್ತೆ, ೭೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.

ಎಸ್. ರಘುನಾಥ್, ಬಿನ್ ಶೇಷಗಿರಿ, ೨೩ ವರ್ಷ, ನಂ. ೫೬, ಗೋಪಾಲಕೃಷ್ಣ ಗುಡಿ ಬೀದಿ ಚಿಕ್ಕಪೇಟೆ ಕ್ರಾಸ್, ಬೆಂಗಳೂರು.

ಎಸ್. ಆರ್. ಜನಾರ್ಧನ್, ಬಿನ್ ಎಸ್. ಎಂ. ರುದ್ರಪ್ಪ,
೨೬ ವರ್ಷ, ನಂ. ೧೫೯೮೪೪, ೨೭ನೇ ಎ ಕ್ರಾಸ್, ಎಡಿಯೂರು, ೬ನೇ ಬ್ಲಾಕ್, ಜಯನಗರ
ಬೆಂಗಳೂರು.

ಶೇ. ಬೊ. ರಾಧಾಕೃಷ್ಣ, ಬಿನ್ ಬೊ. ಲಿಯಪ್ಪ,
೨೫ ವರ್ಷ, ನಂ. ೬೦೪, ಮೊದಲನೇ ಇ ಆಡ್ಡರಸ್ಟೆ, ಮತ್ತೀಕೆರೆ, ಬೆಂಗಳೂರು.

ಅಶೋಕ ಬಿನ್ ರಾಮಣ್ಣ,
೨೨ ವರ್ಷ, ನಂ. ೨೦, ೬ನೇ ಕ್ರಾಸ್, ಗಾಂಧೀನಗರ, ಬೆಂಗಳೂರು.
ಎಂ. ಸಿ. ಕೆ. ಮೂರ್ತಿ, ಬಿನ್ ಮುನಿರಾಜು,
ವಯಸ್ಸು ೨೬, ನಂ. ೮೧, ೧೨ನೇ ಮುಖ್ಯರಸ್ತೆ, ಮತ್ತೀಕೆರೆ, ಬೆಂಗಳೂರು.
ರಾಜು ಬಿನ್ ರಾಮು,
೨೪ ವರ್ಷ, ನಂ. ೬೦೩, ೩ನೇ ಮುಖ್ಯ ರಸ್ತೆ, ೧ನೇ ಕ್ರಾಸ್, ಮತ್ತೀಕೆರೆ, ಬೆಂಗಳೂರು.

ಮೇಲ್ಕಂಡ ವ್ಯಕ್ತಿಗಳು ಪ್ರೇಕ್ಷಕರ ವೇದಿಕೆಯಲ್ಲಿ ತೀವ್ರತರವಾದಂಥ ಅವಿವೇಕ ವರ್ತನೆಯಿಂದ ಘೋಷಣೆಗಳನ್ನು ಕೂಗುತ್ತಾ ಕರಪತ್ರಗಳನ್ನು ಎಸೆದುದಕ್ಕಾಗಿ ಪಹರೆ ಮತ್ತು ನಿಗಾವಣೆ ಸಿಬ್ಬಂದಿಯವರು ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಅವರನ್ನು ಬಂಧಿಸಿ ಹೊರಗಡೆ ಕರೆದುಕೊಂಡು ಹೋಗಲು ಪ್ರಯತ್ನಿಸಿದಾಗ ಅದನ್ನು ತೀವ್ರವಾಗಿ ಪ್ರತಿಭಟಿಸಿ, ತೀವ್ರ ಸ್ವರೂಪದ ಬಲ ಪ್ರಯೋಗ ಮಾಡಿ ಸಿಬ್ಬಂದಿ ಪೇದೆ ಸಂಖ್ಯೆ ೧೭೮೫, ಇವರಿಗೆ ರಕ್ತಗಾಯ ಮಾಡಿದ್ದಾರೆ. ಈ ವ್ಯಕ್ತಿಗಳಿಗೆ ಶಾಸಕರಾದಂಥ ಶ್ರೀ ಪಟ್ಟಣ ಶೆಟ್ಟಿ, ಬೀದರ್ ಜಿಲ್ಲೆ, ಶ್ರೀ ಎಸ್. ಎಸ್. ಕೌಜಲಗಿ ಬೆಳಗಾವಿ ಜಿಲ್ಲೆ, ಹಾಗೂ ಶ್ರೀ ಹನುಮೇಗೌಡ ಹಾಸನ ಜಿಲ್ಲೆ ಇವರ ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸು ಮಾಡಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ.

ಇಂಥ ವ್ಯಕ್ತಿಗಳಿಗೆ ಇನ್ನು ಮುಂದೆ ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸನ್ನು ಮಾಡುವ ಮಾನ್ಯ ಸದಸ್ಯರುಗಳು ಇಂಥ ಘಟನೆಗಳಿಗೆ ಅವಕಾಶ ಕೊಡದಂತೆ ಎಚ್ಚರವಹಿಸಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳಿಗೂ ವಿನಂತಿಸುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ (ಮುಖ್ಯ ಸಚೇತಕರು) —ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ನಿರ್ಣಯವನ್ನು ನಾನು ಈ ಸದನದಲ್ಲಿ ಮಂಡಿಸುತ್ತಾ ಇದ್ದೇನೆ. ಶ್ರೀಯುತರುಗಳಾದ ಗುರುಪ್ರಸಾದ್ ರಾಮೇಗೌಡ, ನಾರಾಜ, ರಾಧಾಕೃಷ್ಣ, ಎಂ.ಸಿ.ಕೆ. ಮೂರ್ತಿ, ಶ್ರೀನಿವಾಸಮೂರ್ತಿ, ರಾಜು, ಅಲೋಕ, ರಘುನಾಥ್ ಎ. ಕೆ. ಆರ್ ಜಗನ್ನಾಥ್ ಇವರುಗಳು ಬೆಳಗಾವಿ ನಗರಸಭೆಯ ಕಟ್ಟಡದ ಮೇಲೆ ಎಂ.ಇ.ಎಸ್. ಧ್ವಜವನ್ನು ಕೆಳಗಿಳಿಸಬೇಕೆಂದು ಘೋಷಣೆ ಕೂಗುತ್ತಾ ಕರಪತ್ರಗಳನ್ನು ಈ ದಿನ ಬೆಳಿಗ್ಗೆ ೧೧-೩೫ ಘಂಟೆಯಲ್ಲಿ ಎಸೆದು ಸಭಾಕಲಾಪಗಳು ನಡೆಯುವಂತೆ ಮಾಡಿದ್ದಾರೆ. ಸದನದ ಪಹರೆ ಮತ್ತು ನಿಗಾವಣೆ ಸಿಬ್ಬಂದಿಯವರು ಇವರುಗಳನ್ನು ಬಂಧಿಸಿ ಹೊರಗಡೆ ಕರೆದುಕೊಂಡು ಹೋಗಲು ಪ್ರಯತ್ನಿಸಿದಾಗ ಅದನ್ನು ತೀವ್ರವಾಗಿ ಪ್ರತಿಭಟಿಸಿ ತೀವ್ರ ಸ್ವರೂಪದ ಬಲ ಪ್ರಯೋಗ ಮಾಡಿ ಸಿಬ್ಬಂದಿ ಪೇದೆ ಸಂಖ್ಯೆ ೧೭೮೫, ಇವರಿಗೆ ರಕ್ತ ಬರುವಂತೆ ಮಾಡಿದ್ದಾರೆ. ಇದು ಗುರುತರವಾದ ಅಪರಾಧ ಹಾಗೂ ಸದನಕ್ಕೆ ಅಗೌರವ ತಂದಂತಾಗಿದೆ. ಸದನದ ಪಹರೆ ಹಾಗೂ ನಿಗಾ ಸಿಬ್ಬಂದಿಯವರು ಮೇಲ್ಕಂಡವರನ್ನು ಬಂಧಿಸಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮೇಲ್ಕಂಡವರಿಗೆಲ್ಲಾ ಮೂರು ದಿನಗಳ ಸಾದಾ ಶಿಕ್ಷೆಯನ್ನು ವಿಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಕಳುಹಿಸಬೇಕೆಂದು ಈ ಸದನದಲ್ಲಿ ನಿರ್ಣಯವನ್ನು ಮಂಡಿಸುತ್ತೇನೆ.

೬—೨೦ ಪಿ. ಎಂ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ವಿರೋಧಿಸಿ, ಕೆಲವು ಮಾತುಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಬೆಳಗಾವಿಯಲ್ಲಿರತಕ್ಕ ಪರಿಸ್ಥಿತಿಯನ್ನು, ಬೆಳಗಾವಿ ನಗರ ಸಭೆಯ ಚುನಾವಣೆಯನ್ನು ವಿರೋಧಿಸಲಿಕ್ಕಾಗಿ ಬಂದು ಮತ್ತು ಬೆಳಗಾವಿ ನಗರ ಸಭೆಯ ಮೇಲಿರುವ ಮರಾಠಿ ಧ್ವಜವನ್ನು ತೆಗೆಯಬೇಕೆಂದೂ, ಮತ್ತು ಈ ಸರೋಜಿನಿ ಮಹಿಷಿಯ ವರದಿಯನ್ನು ಒಪ್ಪಬೇಕೆಂದು ಹೇಳಿ, ಸಮಗ್ರವಾಗಿ ಒತ್ತಾಯ ಮಾಡಲು ಬೆಳಗಾವಿ ನಗರದಿಂದ ಸುಮಾರು ೬೫೦ ಕಿ. ಮೀ. ದೂರದಿಂದ, ತಮ್ಮ ತಮ್ಮ ಬುತ್ತಿಗಳನ್ನು ಕಟ್ಟಿಕೊಂಡು ಕನ್ನಡದ ಅಭಿಮಾನದಿಂದ ಈ ಊರಿಗೆ ಸತ್ಯಾಗ್ರಹ ಮಾಡಲು ಬಂದಿದ್ದಾರೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದೇ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಹತ್ತಾರು ಜನ ಕನ್ನಡದಲ್ಲಿರವಾಗಿ